**Akashvani : Bangalore**
**National Bulletin In Kannada**
**25.05.2024 / 19.35 hrs**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**<><*<><>*><>**

ಮುಖ್ಯಾಂಶಗಳು

೧. ಲೋಕಸಭೆಯ ೬ನೇ ಹಂತದ ಮತಕ್ಷೇತ್ರಗಳಲ್ಲಿ ಶಾಂತಿಯುತ ಮತದಾನ

೨. ಏಳನೇ ಹಂತದ ಚುನಾವಣಾ ಕ್ಷೇತ್ರಗಳಲ್ಲಿ ರಾಜಕೀಯ ಪಕ್ಷಗಳಿಂದ ಬಿರುಸಿನ ಪ್ರಚಾರ

೩. **ಚುನಾವಣೆ,** ಪ್ರಜಾತಂತ್ರದ ಅತಿ ದೊಡ್ಡ ಸಂಭ್ರಮಾಚರಣೆ - ಪ್ರಧಾನಮಂತ್ರಿ

೪. ಅಭಿನೇತ್ರಿ ಅನುಸೂಯ ಸೆನ್ ಗುಪ್ತಾಗೆ ಕೇನ್ಸ್ ಉತ್ತಮ ನಟಿ ಪ್ರಶಸ್ತಿ

೫. ಮಲೇಷಿಯಾ ಮಾಸ್ಟರ್ಸ್ ಬ್ಯಾಡ್ಮಿಂಟನ್; ಫೈನಲ್ಸ್‌ಗೆ ಪಿ.ವಿ.ಸಿಂಧೂ

೬. ಐಪಿಎಲ್ ಕ್ರಿಕೆಟ್: ನಾಳೆ ಫೈನಲ್ಸ್; ಕೋಲ್ಕತ್ತಾ ನೈಟ್ ರೈಡರ್ಸ್ -ಸನ್‌ರೈಸರ್ಸ್ ಹೈದರಾಬಾದ್ ಮುಖಾಮುಖಿ

**<><*<><>*><>**

ಲೋಕಸಭಾ ಚುನಾವಣೆಯ ೬ನೇ ಹಂತದ ಕ್ಷೇತ್ರಗಳಲ್ಲಿ ಇಂದು ಶಾಂತಿಯುತ ಮತದಾನ ನಡೆಯಿತು. ನಡೆಯಿತು. ಈ ಹಂತದಲ್ಲಿ ೮ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶ ಒಳಗೊಂಡಂತೆ ಒಟ್ಟು ೫೮ ಒಳಗೊಂಡಂತೆ ಒಟ್ಟು ೫೮ ಲೋಕಸಭಾ ಕ್ಷೇತ್ರಗಳಲ್ಲಿ ಚುನಾವಣೆ ನಡೆಯಿತು. ಈ ಹಂತದಲ್ಲಿ ಹಂತದಲ್ಲಿ ಬಿಹಾರದ ೮, ಹರ್ಯಾಣದ ೧೦, ಜಾರ್ಖಂಡ್‌ನ ೪, ಒಡಿಶಾದ ೬, ಉತ್ತರಪ್ರದೇಶದ ೧೪, ಉತ್ತರಪ್ರದೇಶದ ೧೪, ಪಶ್ಚಿಮ ಬಂಗಾಳದ ೮, ದೆಹಲಿಯ ಎಲ್ಲಾ ೭ ಹಾಗೂ ಜಮ್ಮು-ಕಾಶ್ಮೀರದ ೧ ಕಾಶ್ಮೀರದ ೧ ಕ್ಷೇತ್ರಗಳಲ್ಲಿ ಹಾಗೂ ಒಡಿಶಾದ ೪೨ ವಿಧಾನಸಭಾ ಕ್ಷೇತ್ರಗಳಿಗೂ ಏಕಕಾಲದಲ್ಲಿ ಏಕಕಾಲದಲ್ಲಿ ಚುನಾವಣೆ ನಡೆಯಿತು. ಬಿಜೆಪಿಯ ಹಿರಿಯ ನಾಯಕರಾದ ಧರ್ಮೇಂದ್ರ ಪ್ರಧಾನ್, ಪ್ರಧಾನ್, ಮೇನಕಾ ಗಾಂಧಿ, ನವೀನ್ ಜಿಂದಾಲ್, ಮನೋಹರ್ ಲಾಲ್ ಖಟ್ಟರ್, ಅಭಿಜಿತ್ ಗಂಗೂಲಿ, ಗಂಗೂಲಿ, ಸಂಬಿತ್ ಪಾತ್ರ, ಬಾನ್ಸುರಿ ಸ್ವರಾಜ್ ಮತ್ತು ಮನೋಜ್ ತಿವಾರಿ, ಕಾಂಗ್ರೆಸ್ ನಾಯಕರಾದ ನಾಯಕರಾದ ದೀಪೇಂದರ್ ಸಿಂಗ್ ಹೂಡಾ, ಕುಮಾರಿ ಸೆಲ್ಜಾ, ರಾಜ್ ಬಬ್ಬರ್ ಮತ್ತು ಕನ್ಹಯ್ಯಾ ಕನ್ಹಯ್ಯಾ ಕುಮಾರ್, ಸಮಾಜವಾದಿ ಪಕ್ಷದ ನಾಯಕ ಧರ್ಮೇಂದ್ರ ಯಾದವ್ ಮತ್ತು ಪಿಡಿಪಿ ಪಿಡಿಪಿ ಮುಖ್ಯಸ್ಥೆ ಮೆಹಬೂಬಾ ಮುಫ್ತಿ ಸೇರಿದಂತೆ ಒಟ್ಟು ೮೮೯ ಅಭ್ಯರ್ಥಿಗಳ ಪ್ರಮುಖ ನಾಯಕರ ಅಭ್ಯರ್ಥಿಗಳ ಪ್ರಮುಖ ನಾಯಕರ ರಾಜಕೀಯ ಭವಿಷ್ಯ ಮತಯಂತ್ರದಲ್ಲಿ ಭದ್ರವಾಗಿದೆ. ೫ ಗಂಟೆಯ ಭದ್ರವಾಗಿದೆ. ೫ ಗಂಟೆಯ ವೇಳೆಗೆ ಬಂದ ವರದಿಯ ಪ್ರಕಾರ ಈ ಕ್ಷೇತ್ರಗಳಲ್ಲಿ ಒಟ್ಟಾರೆ ಶೇಕಡ ೫೮ ಒಟ್ಟಾರೆ ಶೇಕಡ ೫೮ ರಷ್ಟು ಮತದಾನವಾಗಿದೆ. ಬಿಹಾರದಲ್ಲಿ ಶೇಕಡ ೫೨, ಹರಿಯಾಣದ ಶೇಕಡ ೫೬,

ಶೇಕಡ ೫೬, ಜಾರ್ಖಂಡ್‌ನಲ್ಲಿ  ಶೇಕಡ ೬೧, ಒಡಿಶಾದ ಶೇಕಡ ೬೦, ಉತ್ತರಪ್ರದೇಶದ ೫೨, ಪಶ್ಚಿಮಬಂಗಾಳದಲ್ಲಿ ೭೮, ದೆಹಲಿಯಲ್ಲಿ ೫೪ ಹಾಗೂ ಜಮ್ಮು-ಕಾಶ್ಮೀರದಲ್ಲಿ ಶೇಕಡ ೫೧ ರಷ್ಟು ಶೇಕಡ ೫೧ ರಷ್ಟು ಮತದಾನವಾಗಿದೆ. ದೆಹಲಿಯಲ್ಲಿಂದು ರಾಷ್ಟ್ರಪತಿ ದ್ರೌಪದಿ ಮುರ್ಮು, ಮುರ್ಮು, ಉಪರಾಷ್ಟ್ರಪತಿ ಜಗದೀಪ್ ಧನಕರ್, ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಕೇಜ್ರಿವಾಲ್ ಕೇಂದ್ರ ಸಚಿವರಾದ ಡಾ. ಎಸ್. ಜೈಶಂಕರ್, ಹರ್‌ದೀಪ್ ಸಿಂಗ್ ಪುರಿ,  ಕಾಂಗ್ರೆಸ್ ಕಾಂಗ್ರೆಸ್ ನಾಯಕರಾದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಪ್ರಿಯಾಂಕ ಗಾಂಧಿ, ಆಪ್ ನಾಯಕಿ ನಾಯಕಿ ಅತೀಶಿ, ಮುಖ್ಯ ಚುನಾವಣಾಧಿಕಾರಿ ರಾಜೀವ್ ಕುಮಾರ್ ಸೇರಿದಂತೆ ಹಲವು ಪ್ರಮುಖರು ಪ್ರಮುಖರು ಮತದಾನದ ಪ್ರಕ್ರಿಯೆಯಲ್ಲಿ ಪಾಲ್ಗೊಂಡರು.

<><*<><>*><>

ಚುನಾವಣೆ, ಪ್ರಜಾತಂತ್ರದ ಅತಿ ದೊಡ್ಡ ಸಂಭ್ರಮಾಚರಣೆಯಾಗಿದೆ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ. ದೂರದರ್ಶನ ಸುದ್ದಿ ವಿಭಾಗಕ್ಕೆ ನೀಡಿದ ಸಂದರ್ಶನದದಲ್ಲಿ ಅವರು, ಪ್ರಜಾತಂತ್ರದ ಮೌಲ್ಯಗಳನ್ನು ಅಳವಡಿಸಿಕೊಳ್ಳಲು ಇದೊಂದು ಸದಾವಕಾಶವಾಗಿದೆ ಎಂದು ತಿಳಿಸಿದ್ದಾರೆ. ಸರ್ಕಾರ ಅಥವಾ ರಾಜಕೀಯ ಪಕ್ಷಗಳು ಈ ಸಂದರ್ಭದಲ್ಲಿ ಜನತೆ ಮುಂದೆ ತಮ್ಮ ಕಾರ್ಯ ವಿವರಗಳನ್ನು ಸಾದರ ಪಡಿಸಬೇಕು ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಧ್ವನಿ: ನರೇಂದ್ರ ಮೋದಿ

<><*<><>*><>

ಪ್ರತಿ ಲೋಕಸಭಾ ಕ್ಷೇತ್ರದ ಮತದಾನ ಕುರಿತಾದ ಸಂಪೂರ್ಣ ಮಾಹಿತಿಯ ನಮೂನೆಯನ್ನು ವಿಸ್ತೃತಗೊಳಿಸಲು ಚುನಾವಣಾ ಆಯೋಗ ನಿರ್ಧರಿಸಿದೆ. ಮೊದಲ ಐದು ಹಂತಗಳಲ್ಲಿ ೫೦ ಕೋಟಿ ೭೨ ಲಕ್ಷದ ೯೭ ಸಾವಿರದ ೨೮೮ ಮತದಾರರು ಮತ ಚಲಾಯಿಸಿದ್ದಾರೆ ಎಂದು ಆಯೋಗ ತಿಳಿಸಿದೆ.

<><*<><>*><>

ಲೋಕಸಭೆಯ ಏಳನೇ ಹಂತದ ಮತಕ್ಷೇತ್ರಗಳಲ್ಲಿ ವಿವಿಧ ರಾಜಕೀಯ ಪಕ್ಷಗಳಿಂದ ಸಾರ್ವಜನಿಕ ಸಭೆ, ರ್‍ಯಾಲಿ, ರೋಡ್ ಶೋ, ಅಬ್ಬರದ ಪ್ರಚಾರ ನಡೆಯುತ್ತಿವೆ. ಈ ಹಂತದಲ್ಲಿ ೫೭ ಲೋಕಸಭಾ ಕ್ಷೇತ್ರಗಳಿಗೆ ಚುನಾವಣೆ ನಡೆಯಲಿದೆ. ಉತ್ತರ ಪ್ರದೇಶ ಮತ್ತು ಪಂಜಾಬ್‌ನ ತಲಾ ೧೩, ಪಶ್ಚಿಮ ಬಂಗಾಳದ ೯, ಬಿಹಾರದ ೮, ಒಡಿಶಾದ ೬, ಹಿಮಾಚಲ ಪ್ರದೇಶದ ೪, ಜಾರ್ಖಂಡ್‌ನ ೩ ಮತ್ತು ಚಂಡೀಗಢ್ ಕೇಂದ್ರಾಡಳಿತ ಪ್ರದೇಶದ ೧ ಲೋಕಸಭಾ ಕ್ಷೇತ್ರಗಳಲ್ಲಿ ಜೂನ್ ೧ ರಂದು ಮತದಾನ ನಡೆಯಲಿದೆ.

ಐಎನ್‌ಡಿಐ ಮೈತ್ರಿಕೂಟ, ವಂಶಪರಂಪರೆ ರಾಜಕಾರಣದ ಅವಕಾಶವಾದಿ ಮೈತ್ರಿಯಾಗಿದೆ ಎಂದು ಎಂದು ಪ್ರಧಾನಮಂತ್ರಿ ಹಾಗೂ ಬಿಜೆಪಿ ಹಿರಿಯ ಧುರೀಣ ನರೇಂದ್ರ ಮೋದಿ ಆಪಾದಿಸಿದ್ದಾರೆ. ಅವರು, ಆಪಾದಿಸಿದ್ದಾರೆ. ಅವರು, ಪಾಟಲಿಪುತ್ರ ಲೋಕಸಭೆಯ ಬಿಕ್ರಮ್‌ನಲ್ಲಿಂದು ಸಾರ್ವಜನಿಕ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಿ, ಇಂಡಿ ಮೈತ್ರಿಕೂಟ ಜಾತಿಯುತ, ಕೋಮುವಾದಿ

ಕೋಮುವಾದಿ ಪಕ್ಷವಾಗಿದೆ ಎಂದು ಆರೋಪಿಸಿದರು. ಕಾಂಗ್ರೆಸ್, ಸಮಾಜವಾದಿ ಪಕ್ಷ, ನ್ಯಾಷನಲ್
ನ್ಯಾಷನಲ್ ಕಾನ್ಫರೆನ್ಸ್, ಆರ್‌ಜೆಡಿ, ಎನ್‌ಸಿಪಿ ಮತ್ತು ಆಮ್‌ಆದ್ಮಿಯಂತಹ ಕುಟುಂಬ ಕೇಂದ್ರಿತ
ಕೇಂದ್ರಿತ ಪಕ್ಷಗಳು ಪ್ರಧಾನಮಂತ್ರಿ ಸ್ಥಾನವನ್ನು ಆಟದ ಸ್ಥಾನವನ್ನಾಗಿಸಲು ಬಯಸಿವೆ ಎಂದು
ಬಯಸಿವೆ ಎಂದು ದೂರಿದರು. ಕಾಂಗ್ರೆಸ್ ಹಾಗೂ ಅದರ ಮೈತ್ರಿಪಕ್ಷಗಳು ಪರಿಶಿಷ್ಟ ವರ್ಗ ಹಾಗೂ
ವರ್ಗ ಹಾಗೂ ಇತರ ಹಿಂದುಳಿದ ಸಮುದಾಯದ ಮೀಸಲಾತಿಯನ್ನು ಬಳಿಸಿ ಓಲೈಕೆ ರಾಜಕಾರಣ
ರಾಜಕಾರಣ ಮಾಡುತ್ತಿವೆ. ಧರ್ಮದ ಆಧಾರದ ಮೇಲೆ ಮೀಸಲಾತಿ ನೀಡುವುದು ಅಸಂವೈಧಾನಿಕ ಎಂದು
ಅಸಂವೈಧಾನಿಕ ಎಂದು ಹೇಳಿದರು. ಪ್ರಧಾನಮಂತ್ರಿ ಅವರು, ಕರಾಕಟ್‌ನಲ್ಲಿ ಸಾರ್ವಜನಿಕ
ಸಭೆಯನ್ನುದ್ದೇಶಿಸಿ ಮಾತನಾಡಿ, ಐಎನ್‌ಡಿಐ ಮೈತ್ರಿಪಕ್ಷಕ್ಕೆ ಯಾವುದೇ ದೂರದೃಷ್ಟಿ ಇಲ್ಲ. ಅದು
ದೂರದೃಷ್ಟಿ ಇಲ್ಲ. ಅದು ಗೊಂದಲದ ಗೂಡಾಗಿದೆ. ಆರ್ಟಿಕಲ್ -೩೭೦ ವಿಧಿ ರದ್ಧತಿ ಹಾಗೂ
ಹಾಗೂ ಪಾಕಿಸ್ತಾನ ಅಣುಶಕ್ತಿ ಹೊಂದಿದೆ ಎನ್ನುವ ಕಾರಣ ನೀಡಿ, ಜನರನ್ನು ಭಯಪಡಿಸುತ್ತಿದೆ
ಭಯಪಡಿಸುತ್ತಿದೆ ಎಂದರು. ಗಾಝೀಪುರದಲ್ಲಿ ಮಾತನಾಡಿದ ನರೇಂದ್ರ ಮೋದಿ ಅವರು, ತಮ್ಮ
ಅವರು, ತಮ್ಮ ಸರ್ಕಾರ, ಸೈನಿಕರಿಗಾಗಿ ’ಒಂದು ಹುದ್ದೆ, ಒಂದು ಪಿಂಚಣಿ ಸೌಲ್ಯಭವನ್ನು
ಸೌಲ್ಯಭವನ್ನು ಜಾರಿಗೊಳಿಸಿದೆ ಎಂದು ಹೇಳಿದರು. ಬಕ್ಸರ್‌ನಲ್ಲಿ ಲೋಕಸಭಾ ಕ್ಷೇತ್ರದ
ಕ್ಷೇತ್ರದ ಅಹಿರೌಲಿಯಲ್ಲಿ ಮಾತನಾಡಿದ ಅವರು, ವಿರೋಧಿ ಮೈತ್ರಿಕೂಟಗಳಿಗೆ ಯಾವುದೇ
ಯಾವುದೇ ದೂರದೃಷ್ಟಿ ಇಲ್ಲ. ತಮ್ಮ ಎನ್‌ಡಿಎ ಮೈತ್ರಿಕೂಟ, ದೇಶವನ್ನು ೨೦೪೭ರ ವೇಳೆಗೆ
ವೇಳೆಗೆ ಅಭಿವೃದ್ಧಿ ಹೊಂದಿದ ದೇಶವನ್ನಾಗಿಸುವ ಗುರಿ ಹೊಂದಿದೆ ಎಂದು ಹೇಳಿದರು.
ಹೇಳಿದರು. ಉತ್ತರಪ್ರದೇಶದ ಮುಖ್ಯಮಂತ್ರಿ, ಹಿರಿಯ ಬಿಜೆಪಿ ಧುರೀಣ ಯೋಗಿ ಆದಿತ್ಯನಾಥ್ ಅವರು,
ಆದಿತ್ಯನಾಥ್ ಅವರು, ಸಲೆಂಪುರ್ ಬಲ್ಲಿಯಾ ಮತ್ತು ಚಂದೌಲಿಗಳಲ್ಲಿಂದು ತಮ್ಮ ಪಕ್ಷದ ಅಭ್ಯರ್ಥಿಗಳ
ಪಕ್ಷದ ಅಭ್ಯರ್ಥಿಗಳ ಪರ ಮತಯಾಚಿಸಿದರು. ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದಲ್ಲಿ ಕಳೆದ
ನೇತೃತ್ವದಲ್ಲಿ ಕಳೆದ ಹತ್ತು ವರ್ಷಗಳಲ್ಲಿ ನಕ್ಸಲೀಯ ಚಟುವಟಿಕೆ ಹಾಗೂ ಭಯೋತ್ಪಾದಕತೆಯನ್ನು
ಭಯೋತ್ಪಾದಕತೆಯನ್ನು ನಿವಾರಿಸಲಾಗಿದೆ. ಹೊಸ ಭಾರತಕ್ಕಾಗಿ ಸತತ ಪ್ರಯತ್ನ ಹಾಗೂ ಪಯಣ
ಹಾಗೂ ಪಯಣ ಆರಂಭವಾಗಿದೆ ಎಂದರು. ಗೋರಖ್‌ಪುರ್‌ದಲ್ಲಿ ನಡೆದ ರ‍್ಯಾಲಿಯಲ್ಲಿ
ಬಹುಜನಸಮಾಜ ಪಕ್ಷದ ನಾಯಕಿ ಮಾಯಾವತಿ ಮಾತನಾಡಿ, ಕಾಂಗ್ರೆಸ್ ತನ್ನ ತಪ್ಪು ನೀತಿಗಳಿಂದಾಗಿ
ನೀತಿಗಳಿಂದಾಗಿ ಅಧಃಪಥನ ಕಾಣುತ್ತಿದೆ ಎಂದು ಟೀಕಿಸಿದರು. ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ,
ಕೇಂದ್ರ ಸರ್ಕಾರ, ಉಚಿತ ಪಡಿತರ ವಿತರಣೆ ಮೂಲಕ ಮತಗಳಿಸಲು ಪ್ರಯತ್ನಿಸುತ್ತಿದೆ ಎಂದು
ಎಂದು ದೂರಿದರು. ಸಮಾಜವಾದಿ ಪಕ್ಷ, ಉತ್ತರಪ್ರದೇಶದಲ್ಲಿ ಅಧಿಕಾರದಲ್ಲಿರುವಾಗ ಪರಿಶಿಷ್ಟ
ಪರಿಶಿಷ್ಟ ವರ್ಗದ ನೌಕರರ ಬಡ್ತಿ ಮೀಸಲಾತಿಯನ್ನು ತೆಗೆದು ಹಾಕಿತು ಎಂದು ಹೇಳಿದರು. ಕಾಂಗ್ರೆಸ್
ಹೇಳಿದರು. ಕಾಂಗ್ರೆಸ್ ಪ್ರಧಾನಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಹಾಗೂ ಸಮಾಜವಾದಿ ಪಕ್ಷದ
ಸಮಾಜವಾದಿ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಅಖಿಲೇಶ್ ಯಾದವ್ ಅವರು, ಜಂಟಿಯಾಗಿ ಚುನಾವಣಾ
ಜಂಟಿಯಾಗಿ ಚುನಾವಣಾ ಸಭೆ ನಡೆಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಪ್ರಿಯಾಂಕ ಗಾಂಧಿ,
ಗಾಂಧಿ, ಕ್ರೇಂದ್ರದಲ್ಲಿರುವ ಎನ್‌ಡಿಎ ಸರ್ಕಾರದ ತಪ್ಪು ನೀತಿಗಳಿಂದಾಗಿ ದೇಶದಲ್ಲಿ ಹಣದುಬ್ಬರ
ದೇಶದಲ್ಲಿ ಹಣದುಬ್ಬರ ಹಾಗೂ ನಿರುದ್ಯೋಗ ಹೆಚ್ಚಿದೆ. ಜನಸಾಮಾನ್ಯರು ತೊಂದರೆಯನ್ನು
ತೊಂದರೆಯನ್ನು ಎದುರಿಸುತಿದ್ದಾರೆ ಎಂದು ಆಪಾದಿಸಿದರು.

<><*<><>*><>

ಫ್ರಾನ್ಸ್‌ನಲ್ಲಿ ನಡೆದಿರುವ ೭೭ನೇ ಕೇನ್ಸ್ ಚಲನಚಿತ್ರೋತ್ಸವದಲ್ಲಿ ಭಾರತದ ಅಭಿನೇತ್ರಿ ಅನಸೂಯ ಸೆನ್ ಗುಪ್ತಾ, ಉತ್ತಮ ನಟಿ ಪ್ರಶಸ್ತಿಗೆ ಪಾತ್ರರಾಗಿದ್ದು, ಇದನ್ನು ಪಡೆದ ಮೊದಲ ಭಾರತೀಯರು ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಬಲ್ಗೇರಿಯಾದ ನಿರ್ಮಾಪಕ ಕಾನ್‌ಸ್ಟಂಟಿಂಗ್ ಭೋಜನೊವಾ ಬರೆದು ನಿರ್ದೇಶಿಸಿದ ದ ಶೇಮ್ ಲೆಸ್ ಚಿತ್ರದಲ್ಲಿನ ಅಮೋಘ ಅಭಿನಯಕ್ಕಾಗಿ ಅನಸೂಯ ಸೆನ್ ಗುಪ್ತಾ ಅವರಿಗೆ ಅನ್‌ಸರ್ಟನ್ ರಿಗಾರ್ಡ್ ವರ್ಗದಲ್ಲಿ ಈ ಗೌರವ ದೊರೆತಿದೆ.

**<><*<><>*><>**

ಭಾರತದ ಪಿ.ವಿ.ಸಿಂಧೂ, ಮಲೇಷಿಯಾದ ಕೌಲಾಲಂಪುರ್‌ನಲ್ಲಿ ನಡೆದಿರುವ ಮಲೇಷಿಯಾ ಮಾಸ್ಟರ್ಸ್ ಬ್ಯಾಡ್ಮಿಂಟನ್‌ನ ಮಹಿಳೆಯರ ಸಿಂಗಲ್ಸ್‌ನಲ್ಲಿ ಫೈನಲ್ಸ್ ಪ್ರವೇಶಿಸಿದ್ದಾರೆ. ಇಂದು ನಡೆದ ಪಂದ್ಯದಲ್ಲಿ ವಿಶ್ವದ ೨೦ನೇ ಶ್ರೇಯಾಂಕಿತ ಆಟಗಾರ್ತಿ ಥಾಯ್ಲೆಂಡ್‌ನ ಬುಸಾನಾನ್ ಓಂಗ್‌ಬಮ್ರುಂಗ್‌ಪಾನ್ ಅವರನ್ನು ೧೩-೨೧, ೨೧-೧೬ , ೨೧-೧೨ ಅಂತರದಿಂದ ಪರಾಭವಗೊಳಿಸಿದರು. ನಾಳೆ ನಡೆಯಲಿರುವ ಫೈನಲ್ಸ್ ಪಂದ್ಯದಲ್ಲಿ ಸಿಂಧೂ ಅವರು ಚೀನಾದ ಝಿ ಇ ವಾಂಗ್ ಅವರನ್ನು ಎದುರಿಸಲಿದ್ದಾರೆ.

**<><*<><>*><>**

ಐಪಿಎಲ್ ಟಿ-೨೦ ಕ್ರಿಕೆಟ್ ಟೂರ್ನಿ ಕೊನೆಯ ಹಂತ ತಲುಪಿದ್ದು, ನಾಳೆ ಕೋಲ್ಕತ್ತಾ ನೈಟ್ ರೈಡರ್ಸ್ ಹಾಗೂ ಸನ್‌ರೈಸರ್ಸ್ ಹೈದರಾಬಾದ್ ನಡುವೆ ಫೈನಲ್ ಪಂದ್ಯ ನಡೆಯಲಿದೆ. ಚೆನ್ನೈನ ಎಂ.ಎ. ಚಿದಂಬರಂ ಕ್ರೀಡಾಂಗಣದಲ್ಲಿ ನಡೆಯಲಿರುವ ಈ ಪಂದ್ಯ ನಾಳೆ ಸಂಜೆ ೭.೩೦ಕ್ಕೆ ಆರಂಭವಾಗಲಿದೆ.

**<><*<><>*><>**

ಜಪಾನ್ ಕೋಬೆಯಲ್ಲಿ ನಡೆದಿರುವ ಪ್ಯಾರಾ ಅಥ್ಲೆಟಿಕ್ಸ್ ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ಭಾರತದ ಸಿಮ್ರನ್‌ಶರ್ಮಾ ೨೦೦ ಮೀಟರ್ ಮಹಿಳೆಯರ ವರ್ಗದಲ್ಲಿ ಚಿನ್ನ ಗೆದ್ದಿದ್ದಾರೆ. ಟಿ-೧೨ ವರ್ಗದಲ್ಲಿ ಅವರು, ೨೦೦ ಮೀಟರ್ ದೂರವನ್ನು ೨೪.೯೫ ಸೆಕೆಂಡ್‌ಗಳಲ್ಲಿ ಕ್ರಮಿಸಿದರು. ಮಹಿಳೆಯರ ೧೦೦ ಮೀಟರ್ ಟಿ-೩೫ ವರ್ಗದಲ್ಲಿ ಭಾರತದ ಪ್ರೀತಿಪಾಲ್ ಕಂಚು ಗಳಿಸಿದರೆ, ಪುರುಷರ ಜಾವೆಲಿನ್ ಥ್ರೋ ಎಫ್-೪೧ ವಿಭಾಗದಲ್ಲಿ ನವದೀಪ್ ಕಂಚು ಗೆದ್ದಿದ್ದಾರೆ. ಭಾರತ ಇದುವರೆಗೆ ೬ ಚಿನ್ನ, ೫ ಬೆಳ್ಳಿ ಹಾಗೂ ೬ ಕಂಚು ಸೇರಿದಂತೆ ಒಟ್ಟು ೧೭ ಪದಕಗಳನ್ನು ಗಳಿಸಿದೆ.

**<><*<>** ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು **<>*><>**

**<><*<>** ನಮ್ಮ ಮುಂದಿನ ವಾರ್ತಾ ಪ್ರಸಾರ ನಾಳೆ ಬೆಳಿಗ್ಗೆ ೭.೦೫ ಕ್ಕೆ **<>*><>**